**(ಇಂದು ದಿಃ 02-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ಶ್ರೀ. ವಿ.ಎಸ್.ಆರ್ ವಕೀಲರಿಂದಃ-**

- ದಿನಾಂಕಃ 29-06-2025ರಂದು ಸೇಡಂ ಸರ್ಕಾರಿ ಆಸ್ಪತ್ರೆಯವರು ನೀಡಿರುವ ಅಂಗನ್ಯೂನತಾ ಪ್ರಮಾಣ ಪತ್ರ ಹಾಜರು ಪಡಿಸಿರುತ್ತೇನೆ ಸದರಿ ದಾಖಲಾತಿಯನ್ನು ನಿಶಾನೆಯಾಗಿ ಗುರುತಿಸಲು 2ನೇ ಎದುರುದಾರ ಪರ ವಕೀಲರು ತಕರಾರು ಎತ್ತಿದ್ದು, ಸದರಿ ತಕರಾರಿಗೆ ಒಳಪಟ್ಟು ದಾಖಲಾತಿಯನ್ನು ನಿಪಿ-20 ಎಂದು ಗುರುತಿಸಲಾಯಿತು.
- ಪಿಂಚಣಿ ಮಂಜುರಾತಿ ಆದೇಶ ಪತ್ರವನ್ನು ನಿಪಿ-21 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**ಪಾಟೀ ಸವಾಲುಃ- ಎದುರುದಾರರ ಪರ ಶ್ರೀ. ಟಿ.ವಿ.ಪಿ. ವಕೀಲರಿಂದಃ-**

ನಮ್ಮ ಗ್ರಾಮ ಹಂದರಕಿ. ನಿಪಿ-20 ಮತ್ತು 21ಅನ್ನು ಪಿಂಚಣಿ ಮಾಡಿಸಿಕೊಳ್ಳುವ ಸಲುವಾಗಿ ಪಡೆದುಕೊಂಡಿದ್ದೇನೆ. ಸೇಡಂ ಸರ್ಕಾರಿ ಆಸ್ಪತ್ರೆಯ ವೈದ್ಯರು ನಿಪಿ-20ಅನ್ನು ನೀಡಿದ್ದಾರೆ. ನಿಪಿ-21ಅನ್ನು ಕೂಡ್ಲಾದಲ್ಲಿ ಕೊಟ್ಟಿದ್ದಾರೆ ಎಂದರೆ ಸರಿ. ಸೇಡಂ ಆಸ್ಪತ್ರೆಯ ವೈದ್ಯರಿಗೆ ನಿಪಿ-20 ಪ್ರಮಾಣ ಪತ್ರ ನೀಡಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಪಿ-21 ಮಂಜೂರಾತಿ ಪತ್ರದಲ್ಲಿ ನರದ ದೊಷದ ಬಗ್ಗೆ ಉಲ್ಲೇಖ ಇದೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತಕ್ಕೂ ನಿಪಿ-20 ಮತ್ತು 21ಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯ ಕಲಬುರಗಿ ಜಿಲ್ಲಾ ಆಸ್ಪೆತ್ರೆಗೆ ಹೋಗಿ ವೈದ್ಯರ ಮುಂದೆ ಹಾಜರಾಗಿ ಅಂಗನ್ಯೂನತೆ ಪ್ರಮಾಣ ಪತ್ರ ಪಡೆದುಕೊಳ್ಳಿ ಎಂದು ಆದೇಶ ಮಾಡಿದೆ ಎಂದರೆ ಸರಿ. ನಾನು ಆ ರೀತಿ ಮಾಡದೆ ಸೇಡಂ ಸರ್ಕಾರಿ ಆಸ್ಪತ್ರೆಯಿಂದ ಸುಳ್ಳು ಅಂಗನ್ಯೂನತಾ ಪ್ರಮಾಣ ಪತ್ರ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**